<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,</u>
<u>ನ್ಯಾಯಾಲಯ, ಕೆ.ಜಿ.ಎಫ್.</u>

**<u>ಸಿಸಿ ಸಂಖ್ಯೆಃ 747/2022</u>**

**<u>ಪಿರ್ಯಾದಿದಾರರುಃ</u>** ರಾಜ್ಯಪರ ಪೊಲೀಸರು,
ಬೇತಮಂಗಲ ಪೊಲೀಸ್ ಠಾಣೆ.

**ವಿರುದ್ಧ**

**<u>ಆರೋಪಿತರುಃ</u>** 1) ಹರಿಬಾಬು ಅಲಿಯಾಸ್ ಬಾಬು ಬಿನ್ ಗೋಪಾಲಕೃಷ್ಣ, 24 ವರ್ಷ, ವಾಸಃ ವಡ್ರಹಳ್ಳಿ ಗ್ರಾಮ, ಕ್ಯಾಸಂಬಳ್ಳಿ ಹೋಬಳಿ, ಕೆಜಿಎಫ್ ತಾಲ್ಲೂಕು.

2) ರಾಧಕೃಷ್ಣ ಕೆ.ಎಂ. ಬಿನ್ ಲೇಟ್ ಮಲ್ಲಪ್ಪ, 49 ವರ್ಷ, ವಾಸಃ ಕಮ್ಮಸಂದ್ರ ಗ್ರಾಮ, ಕೆಜಿಎಫ್ ತಾಲ್ಲೂಕು.

<u>ಆಪಾದನೆ</u>

ಮುಜಫರ್ ಎ. ಮಾಂಜರಿ, ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್ ಆದ ನಾನು ಆರೋಪಿತರಾದ ನಿಮ್ಮ ಮೇಲೆ ರೂಪಿಸುವ ಆಪಾದನೆಯ ಸಾರಾಂಶ ಏನೆಂದರೆ.

ದಿನಾಂಕಃ 13.02.2021 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶವನ್ನು ಹೊಂದಿ ಶ್ರೀ ಕೋಟಿಲಿಂಗೇಶ್ವರ ದೇವಾಲಯಕ್ಕೆ ಸೇರಿದ ಅಂಗಡಿ ಸಂಖ್ಯೆ 49 ಮತ್ತು 50ರ ಒಳಗೆ ದೋ.ಸಾ.1 ರವರ ಅನುಮತಿಯನ್ನು ಪಡೆಯದೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ 448 ಸಹವಾಚಕ ಕಲಂಃ 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ ಸದರಿ ಅಂಗಡಿಗಳಿಗೆ ಅತಿಕ್ರಮ ಪ್ರವೇಶ ಮಾಡಿ ಅಂಗಡಿಗಳಲ್ಲಿ ಕಬ್ಬಿಣದ ಮೊಳೆಗಳನ್ನು ಹೊಡೆದು ಅಂಗಡಿಗಳ ಅಂದ ಕೆಡಿಸಿ ಸುಮಾರು 6000/-ರೂಗಳಷ್ಟು ನಷ್ಟವನ್ನುಂಟು ಮಾಡಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ 427 ಸಹವಾಚಕ ಕಲಂಃ 34 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ ದೋ.ಸಾ.1 ರವರೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ಧಗಳಿಂದ ಬೈದು ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ 504 ಸಹವಾಚಕ ಕಲಂಃ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ದೋ.ಸಾ.1 ರವರೊಡನೆ ಜಗಳ ತೆಗೆದು ಸದರಿ ಅಂಗಡಿಗಳ ತಂಟೆಗೆ ಬಂದರೆ ಕೊಲೆ ಮಾಡಿ ಸಾಯಿಸುವುದಾಗಿ ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ. ಕಲಂಃ506 ಸಹವಾಚಕ ಕಲಂಃ34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**ಪ್ರಶ್ನೆ** ಃ 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ಆಪಾದನೆಯು ನಿಮಗೆ ತಿಳಿಯಿತೆ?

**ಉತ್ತರ** ಃ 1.

2.

**ಪ್ರಶ್ನೆ** ಃ 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

**ಉತ್ತರ** ಃ 1.

2.

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ 29.08.2025.

Sd/-

(ಮುಜಫರ್ ಎ. ಮಾಂಜರಿ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಕೆ.ಜಿ.ಎಫ್.

## ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಜಿ.ಎಫ್.

**ಸಿಸಿ ಸಂಖ್ಯೆ:**

ಫಿರ್ಯಾದಿದಾರರು :- ರಾಜ್ಯಪರ ಪೊಲೀಸರು,
ಬೇತಮಂಗಲ ಪೊಲೀಸ್ ಠಾಣೆ.

ವಿರುದ್ದ

ಆರೋಪಿ :

ಆರೋಪಣೆ

ಪ್ರಶ್ನೆ : 1. ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು ಅರ್ಥವಾಯಿತಾ ?

ಉತ್ತರ :

ಪ್ರಶ್ನೆ : 2. ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ ?

ಉತ್ತರ :

(ಮೇಲ್ಕಂಡ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಆರೋಪಿಯಾದ ನೀವು ಹೇಳಿದ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ).

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೆ.ಜಿ.ಎಫ್.